# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ದಿನಾಂಕ: 20-03-2021ರ
## ಸಭಾ ನಡುವಳಿ

**ದಿನಾಂಕ: 20-03-2021ರಂದು ಬೆಳ್ಳಿಗೆ 11.00 ಗಂಟೆಗೆ** ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ ಶ್ರೀ ಬಿ.ಎಸ್. ಶ್ರೀಧರ ರವರ ಅಧ್ಯಕ್ಷತೆಯಲ್ಲಿ ದಾಸರಹಳ್ಳಿ ಬಿ.ಬಿ.ಎಂ.ಪಿ ಕಛೇರಿಯಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಎಸ್. ಶ್ರೀಧರ | ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) ಹಾಗೂ ಸ.ಕಾ.ಅ ವ್ಯಾಟರಾಯನಪುರ ಉಪ ವಿಭಾಗ |
| 2 | ಶ್ರೀ ಸುರೇಶದೇವತರಾಜ್ | ಸಹಾಯಕಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಡಾ॥ ಕೇಶವಪಾಣಿ | ವೈದ್ಯಾಧಿಕರಿಗಳು ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಗಡೆನಗರ |
| 4 | ಕೆ.ಆರ್ ಗಂಗಾಧರಯ್ಯ | ಬೆಸ್ಕಾಂ ವಿಭಾಗ |
| 5 | ಎನ್ ಮಹದೇವಯ್ಯ | ಕಂದಾಯ ಉಪ ವಿಭಾಗ, ಥಣಿಸಂದ್ರ |
| 6 | ಶ್ರೀಮತಿ ಸರಸ್ವತಿ ಪಿ.ಎಸ್.ಐ | ಚಿಕ್ಕಜಾಲ ಟ್ರಾಫೀಕ್ ಪೊಲೀಸ್ ಸ್ಟೇಷನ್ |
| 7 | ಎ.ಎಸ್ ರಮೇಶ್ | ಎ.ಎಸ್.ಐ ಚಿಕ್ಕಜಾಲ ಸಂಚಾರಿ ಪೊಲೀಸ್ ಸ್ಟೇಷನ್ |
| 8 | ದುರ್ಗ ಭವಾನಿ | ಪಿ.ಎಸ್.ಐ ಚಿಕ್ಕಜಾಲ ಸಂಚಾರಿ ಪೊಲೀಸ್ ಸ್ಟೇಷನ್ |
| 9 | ಶ್ರೀ ಪ್ರೇಮಕುಮಾರ್ | ಹಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |
| 10 | ಶ್ರೀ ಮಂಜುನಾಥ | ಕಿರಿಯಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 (ಥಣಿಸಂದ್ರ) |

**ಶ್ರೀ ಸುರೇಶದೇವತರಾಜ್:** ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂಯರರು, ವಾರ್ಡ್ ನಂ 06 ರವರು ಸಭೆಗೆಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಕೋವಿಡ್ -19 ರ ಸಂಬಂಧ ಸೊಂಕು ಹರಡವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮಂಜಾಗ್ರತ ಕ್ರಮಗಳ ಬಗ್ಗೆ.** ಶ್ರೀಮತಿ ಡಾ॥ ಕೇಶವ ಪಾಣಿಆರೋಗ್ಯ ವೈದ್ಯಾಧಿಕಾರಿಗಳು, ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರರವರು ಮಾತನಾಡಿ ಒಂದು ವಾರದಿಂದ ಕೋವಿಡ್ ಸೊಂಕು ಹೆಚ್ಚಾಗುತ್ತಿರುವುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಸಹ ಹೆಚ್ಚಾಗಿ ಪಾಸಿಟಿವ್ ಕೇಸೇಸ್ ಬರುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಗಮನ ಹರಿಸಬೇಕು, ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಆಗಾಗ ಕೈತೊಳೆಯಬೇಕು ಹಾಗೂ 6 ಅಡಿ ಅಂತರಕಾಪಾಡುವುದು ಅವಶ್ಯಕವಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

2. **ಶ್ರೀ ಮಂಜುನಾಥ ಕಿರಿಯ ಆರೋಗ್ಯ ನಿರೀಕ್ಷಕರು:** ಸದರಿಯವರು ಮಾತನಾಡಿ ವಾರ್ಡ್ ನಂ 06 ರಲ್ಲಿ ಪ್ರತಿ ದಿನ 4 ಕಾಂಪ್ಯಾಂಕ್ಟರ್‌ಗಳು ತ್ಯಾಜ್ಯವನ್ನು ಸಾಗಿಸಲು ಉಪಯೋಗಿಸಲಾಗುತ್ತಿದೆ ಎಂದು ಹಾಗೂ ಪ್ರತಿ ದಿನ ಸುಮಾರು 7.00 ಟನ್ ಹಸಿ ತ್ಯಾಜ್ಯ ಸಂಗ್ರಹವಾಗುತ್ತಿರುವುದಾಗಿ ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಹಸಿ ತ್ಯಾಜ್ಯದಪ್ರಮಾಣ ಬಹಳ ಕಡಿಮೆಯಾಗಿರುವುದರಿಂದ ವಾರ್ಡ್ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಹಸಿ ತ್ಯಾಜ್ಯ ಬರುವಂತೆ ಅಗತ್ಯ ಕ್ರಮವಹಿಸಲು ಸೂಚಿಸಿದರು. ಒಣ ತ್ಯಾಜ್ಯ ಸಂಗ್ರಹಕ್ಕೆ ಉಪಯೋಗಿಸುತ್ತಿರುವ ವಾಹನಗಳು ಚಿಕ್ಕದಾದಿದ್ದು, ಕೆಲವು ಮನೆಗಳಿಂದ ಒಣತ್ಯಾಜ್ಯ ಸಂಗ್ರಹಿಸಿದಾಗ ಬಹಳ ಬೇಗ ತುಂಬು ಹೋಗುತ್ತಿದ್ದು, ಎರಡನೇಯ ಟ್ರೀಪ್‌ಗೆ ಆಟೋ ಟಿಪ್ಪರ್ ಗಳು ಒಣ ತ್ಯಾಜ್ಯ ಸಂಗ್ರಹಿಸಲು ಬರುತ್ತಿರುವುದಿಲ್ಲ ಎಂದು ಸಾರ್ವಜನಿಕರು ಸಭೆಗೆ ತಿಳಿಸಿದರು ಹಾಗೂ ಆಟೋ ಟಿಪ್ಪರ್‌ಗಳು ಕಡ್ಡಯವಾಗಿ ಮೈಕ್ ಅಳವಡಿಸಲು ಕೋರಿದರು. ಈ ಸಂಬಂದ ಅಗತ್ಯ ಕ್ರಮ ವಹಿಸಲು ನೂಡಲ್ ಅಧಿಕಾರಿಯವರು ಕಿರಿಯ ಆರೋಗ್ಯ ನಿರೀಕ್ಷಕರು ರವರಿಗೆ ಸೂಚಿಸಿದರು.

3. **ಸಾರ್ವಜನಿಕರು ಮಾತನಾಡಿ** : ವಾರ್ಡ್ ವ್ಯಾಪ್ತಿಯಲ್ಲಿ ಬಹಳಷ್ಟು ಚಿಕನ್‌ಶಪ್ ಹಾಗೂ ಮಟನ್ ಶಾಪ್‌ಗಳಿದ್ದು, ಸದರಿ ಅಂಗಡಿಯವರು ನಿಗದಿತ ವಾಹನಗಳಗೆ ವೇಸ್ಟ್ ನೀಡದೇ್ಲ ಹಾಗೂ ರಸ್ತೆಗಳ ಪಕ್ಕದಲ್ಲಿ ಹಾಗೂ ಇನ್ನಿತರೆ ಖಾಲಿ ಜಾಗ್‌ಗಳಲ್ಲಿ ಚಿಕನ್ ಹಾಗೂ ಮಟನ್ ವೇಸ್ಟ್ ಹಾಕುತ್ತಿದ್ದುಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸಂಬಂದಪಟ್ಟ ಅಧಿಕಾರಿಗಳು ಪರಿಶೀಲಿಸಿ ಕ್ರಮ ವಹಿಸಲು ಸಾರ್ವಜನಿಕರು ಕೋರಿದರು. ಸದರಿ ವಿಷಯದ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ಸಂಬಂದಪಟ್ಟ ಸಹಾಯಕ ನಿರ್ದೇಶಕರು, ಪಶುಸಂಗೋಪನಾ ರವರರಿಗೆ ಅಗತ್ಯಕ್ರಮ ವಹಿಸಲು ಕೋರಲಾಗುವುದೆಂದು ತಿಳಿಸಿದರು.

4. **ರವೀಂದ್ರಎಮ್.ಎಸ್. ರಾಮಯ್ಯ ನಾರ್ಥ ಸಿಟಿ** : ಕಾವೇರಿ ಕುಡಿಯುವ ನೀರು ಸರಬರಾಜು ಬಡಾವಣೆಯಲ್ಲಿ ಸರಿಯಾಗಿ ಆಗುತ್ತಿರುವುದಿಲ್ಲವೆಂದು ತಿಳಿಸಿದರು ಹಾಗೂ ಕಾವೇರಿ ಕುಡಿಯುವ ನೀರು ಸರಬರಾಜಿನ ಬಗ್ಗೆ ಸಮಯ ಮತ್ತು ದಿನಾಂಕ ನಿಗದಿಪಡಿಸಿ ಅದರಂತೆ ನೀರು ಸರಬರಾಜು ಮಾಡಿದಲ್ಲಿ ಬಡಾವಣೆ ನಿವಾಸಿಗಳಿಗೆ ಅನುಕುಲವಾಗುವುದೆಂದು ತಿಳಿಸಿದರು. ರಸ್ತೆಪಕ್ಕದ ಚರಂಡಿಗಳನ್ನು ಸ್ವಚ್ಚಗೊಳಿಸಲು ಕೋರದರು ಹಾಗೂ ಬಡಾವಣೆಯಲ್ಲಿ ಕೆಲವು ಸ್ಥಳಗಳಲ್ಲಿ ಅಡಿಗಾಲುವೆಗಳನ್ನು ನಿರ್ಮಾಣ ಮಾಡಲು ಕೋರಿದರು.

5. **ಪೂರ್ಣಿಮಾ ಭೂವನೇಶ್ವರಿನಗರ** : ಭೂವನೇಶ್ವರಿನಗರ ಬಡಾವಣೆಯ ಬಹಳಷ್ಟು ರಸ್ತೆಗಳು ತುಂಬ ಹಾಳಾಗಿದ್ದು, ಸದರಿ ರಸ್ತೆಗಳಿಗೆ ಕೂಡಲೇ ಡಾಂಬರೀಕರಣ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸ ಬೇಕಾಗಿ ಕೋರಿದರು.

6. **ಟ್ರಾಫೀಕ್ ಸಮಸ್ಯೆಬಗ್ಗೆ** : ಭೂವನೇಶ್ವರಿನಗರ ಮುಖ್ಯರಸ್ತೆಯಲ್ಲಿ ರಿಲೈಯನ್ಸ್ ಫ್ರೇಶ್ ಹತ್ತಿರ ಸಾರ್ವಜನಿಕರು ವಾಹನಗಳು ಮನ ಬಂದಂತೆ ವಾಹನಗಳು ನಿಲ್ಲಿಸುತ್ತಿರುವದರಿಂದ ಸಂಜೆ ವೇಳೆಯಲ್ಲಿ ವಾಹನಗಳ ದಟ್ಟಣೆಯಾಗುತ್ತಿದ್ದು, ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದ್ದು, ಟ್ರಾಫೀಕ್ ಪೋಲಿಸ್ ರವರು ಸದರಿ ರಸ್ತೆಯಲ್ಲಿ ವಾಹನಗಳನ್ನು ನಿಗದಿತ ಸ್ಥಳದಲ್ಲಿ ಪಾರ್ಕ್ ಮಾಡಲು ಹಾಗೂ ವಾಹನದಟ್ಟಣೆಯಾಗದಂತೆ ಕ್ರಮ ವಹಿಸಲು ಕೋರಿದರು. ಸದರಿ ಪ್ರದೇಶವನ್ನು ಹೆಬ್ಬಾಳ ಟ್ರಾಫೀಕ್ ಪೋಲಿಸ್ ಸ್ಟೇಷನ್ ವ್ಯಾಪ್ತಿಗೆ ಬರುವ ಕಾರಣ ಹಾಜರಿದ್ದ ಟ್ರಾಫೀಕ್ ಇನ್ಸಪೇಕ್ಟರ್ ರವರು ಸಂಬಂದಿಸಿದವರಿಗೆ ತಿಳಿಸಲಾಗುವುದೆಂದು ತಿಳಿಸಿದರು. ಅದೇ ರೀತಿಯಲ್ಲಿ ಥಣಿಸಂದ್ರ ಮುಖ್ಯರಸ್ತೆಯಲ್ಲಿ ಸಹ ಸಾದಿಕ್ ಬಡಾವಣೆ ಮತ್ತು ಮಾರುತಿ ಸಾಮಿಲ್ ರಸ್ತೆ ಜಂಕ್ಷನ್ ಹತ್ತಿರ ತಳ್ಳುವಗಾಡಿಗಳು ಹೆಚಾಗಿದ್ದು ಫುಟ್ ಪಾತ್‌ಯಲ್ಲಿಯೇ ವ್ಯಾಪಾರಿಗಳು ವ್ಯಾಪಾರ ಮಾಡುತ್ತಿರುವದರಿಂದ ಥಣಿಸಂದ್ರ ಮುಖ್ಯರಸ್ತೆಯಲ್ಲಿ ವಾಹನಗಳ ದಟ್ಟಣೆಯಾಗುತ್ತಿದ್ದು, ಅದ್ದರಿಂದ ಸಂಬಂದಪಟ್ಟ ಟ್ರಾಫೀಕ್ ಪೋಲಿಸ್ ರವರು ಅಗತ್ಯ ಕ್ರಮವಹಿಸಲು ಸಾರ್ವಜನಿಕರು ಕೋರಿದರು.

7. **ಶ್ರೀ ಶ್ರೀನಿವಾಸರಾವ್‌ಅಮರಜ್ಯೋತಿನಗರ** : ಸಿವಿಕ್ ಎಮೆನಿಟಿಸ್ ಕಾಮಗಾರಿಗಳಿಗೆ ಈ ವರ್ಷದ ಬಜೆಟ್ ನಲ್ಲಿ ಅನುವವು ಮಾಡಿಕೊಳ್ಳಬೇಕಾಗಿ ತಿಳಿಸಿದರು. ಬಿ.ಡಿ.ಎರವರಿಗೆ ಪತ್ರ ಬರೆದು ವಾರ್ಡ್ ವ್ಯಾಪ್ತಿಯಲ್ಲಿ ವಿರುವ ಸಿ.ಎ. ನಿವೇಶನಗಳು ಬಿ.ಬಿ.ಎಂ.ಪಿ ಗೆ ಹಸ್ತಾಂತರಿಸಲು ಕೋರಬೇಕಾಗಿ ತಿಳಿಸದರು.

8. **ದಾಸಪ್ಪ ಹೆಗಡೆನಗರನಿವಾಸಿ** : ಹೆಗಡೆನಗರ ವೃತ್ತದ ಹತ್ತಿರ ಅಡಿಗಾಲುವೆ ಸ್ಯಾಬ್ ಮುರಿದು ಹೋಗಿದ್ದುಕೂಡಲೇ ದುರಸ್ತಿ ಮಾಡಲು ಕೊರಿದರು. ಸದರಿದೂರು ವೈಟ್‌ಟಾಪಿಂಗ್ ವಿಭಾಗ ಬಿ.ಬಿ.ಎಂ.ಪಿ ರವರಿಗೆ ಇಲಾಖೆಗೆ ಸಂಬಂದಿಸಿದ್ದು, ಸಂಬಂದಪಟ್ಟ ಅಭಿಯಂತರಿಗೆ ತಿಳಿಸಲಾಗಿದೆ ಎಂದು ವಾರ್ಡ್ ಅಭಿಯಂತರರು ಸಭೆಗೆ ತಿಳಿಸಿದರು. ಹೆಗಡೆನಗರದಲ್ಲಿ ಬೇಸಿಗೆ ಪ್ರಾರಂಭವಾದ್ದರಿಂದ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತಿದ್ದು, ಪರಿಶೀಲಿಸಿ ಅಗತ್ಯಕ್ರಮ ವಹಿಸಲು ಕೋರಿದರು. ಶಬರಿನಗರ ಮುಖ್ಯರಸ್ತೆಯ 7ನೇ ಅಡ್ಡರಸ್ತೆಯ ವರೆಗೆ ಮಾತ್ರ ಯೋಜನಾ ವಿಭಾಗದ ವತಿಯಿಂದ ಚರಂಡಿ ನಿರ್ಮಿಸಲಾಗಿದ್ದು, 7ನೇ ಅಡ್ಡರಸ್ತೆಯಿಂದ 9ನೇ ಅಡ್ಡರಸ್ತೆಯವರೆಗೆ ಚರಂಡಿ ಕಾಮಗಾರಿಯನ್ನು ಯೋಜನಾ ವಿಭಾಗದ ವತಿಯಿಂದ ಕೂಡಲೇ ಕೈಗೊಳ್ಳಲು ಕೋರಿದರು. ಹಾಗೂ ಹೆಬ್ಬಾಳದಲ್ಲಿ ವಿರುವ ವಿದ್ಯೂತ್ ಚಿತಾಗರದಲ್ಲಿ ಸರ್ವಜನಿಕರಿಗೆ ತಕ್ಷಣ ಸ್ಪಂದಿಸಿ ಅನುಕುಲ ಮಾಡಿಕೊಡುತ್ತಿರುವುದಿಲ್ಲವೆಂದು ತಿಳಿಸದರು. ವಾರ್ಡ್‌ಗೆ ಒಬ್ಬರಂತೆ ಮಾರ್ಷಲ್‌ಗಳು ನಿಯೋಜಿಸಿದ್ದು, ವಾರ್ಡ್ ವ್ಯಾಪ್ತಿಯು ಬಹಳ ದೊಡ್ಡದಾಗಿರುವದರಿಂದ ಕನಿಷ್ಠ 2-3 ಮಾರ್ಷಲ್‌ಗಳು ನಿಯೋಜಿಸಬೇಕಾಗಿ ಸಂಬಂದಪಟ್ಟರವರಿಗೆ ಕೋರಲು ತಿಳಿಸಿದರು.

9. **ವಾರ್ಡ್ ಅಭಿಯಂತರರು** : ಬಿ.ಬಿ.ಎಂ.ಪಿ ವತಿಯಿಂದ ಈ ಬಹಳಷ್ಟು ಪ್ರದೇಶಗಳಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ಚರಂಡಿಗಳ ನಿರ್ಮಾಣಕಾಮಗಾರಿ, ಕೈಗೊಳ್ಳಲಾಗಿದ್ದು, ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯಿಂದ ಕಾವೇರಿ ಕುಡಿಯುವ ನೀರಿನ ಹಾಗೂ ಒಳಚರಂಡಿ ಪೈಪುಗಳನ್ನು ಅಳವಡಿಸಲಾಗುತ್ತಿರುವ ಕಾಮಗಾರಿಯಲ್ಲಿ ಬಹಳಷ್ಟು ಜಾಗಗಳಲ್ಲಿ ರೀಸಿವರ್ ಛೇಂಬರಗಳನ್ನು ಅಳವಡಿಸದೇ ಇರುವುದರಿಂದ ಕಾಮಗಾರಿಗಳು ಪೂರ್ಣಗೊಳಿಸಲು ಸಾಧ್ಯಯಾಗುತ್ತಿಲ್ಲ ಎಂದು ಸಭೆಯಲ್ಲಿ ವಾರ್ಡ್ ಅಭಿಯಂತರರು ತಿಳಿಸಿದರು. ಬಿ.ಡಬ್ಲ್ಯೂ.ಎಸ್.ಎಸ್.ಬಿ.ರವರು ಕೂಡಲೇ ಬಾಕಿವಿರುವ ರೀಸಿವರ್ ಛೇಂಬರಗಳನ್ನು ಅಳವಡಿಸಲು ತುರ್ತುಕ್ರಮ ವಹಿಸಬೇಕಾಗಿ ನೋಡಲ್ ಅಧಿಕಾರಿಗಳು ತಿಳಿಸಿದರು.

ಕೊನೆಯದಾಗಿ ಮಾನ್ಯನೋಡಲ್ ಅಧಿಕಾರಿಗಳು, ವಾರ್ಡ್ ಸಮಿತಿರವರು ಮಾತನಾಡಿ ಈವರೆಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಹಾಗೂ ಸಹಾಯಕಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.